2) ಕಾರಂಜಾ ಜಲಾಶಯದಿಂದ ನೀರನ್ನು ಎತ್ತಲು ಕರ್ನಾಟಕ ನೀರಾವರಿ ನಿಗಮದಿಂದ ಅನುಮತಿ ನೀಡುವುದು

ಈ) ಸದರಿ ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್ 2007 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

396 (668) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ). ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊರವಲಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಉಪನಗರಗಳಲ್ಲಿ ಬೆಂಗಳೂರು ನಗರದಿಂದ ಕೇವಲ 40 ಕಿ,ಮೀ ದೂರದಲ್ಲಿರುವ ಹಾಗೂ ಸಮೀಪದಲ್ಲಿರುವ ದೊಡ್ಡಬಳ್ಳಾಪುರ ತಾಲ್ಲೂಕನ್ನು ಅಯ್ಕೆ ಮಾಡದಿರುವುದಕ್ಕೆ ಕಾರಣವೇನು,

ಆ) ಈಗಲಾದರೂ ಇದನ್ನು ಸೇರಿಸಲಾಗುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು).

ಅ) ದೊಡ್ಡಬಳ್ಳಾಪುರ ನಗರವು ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಪ್ರದೇಶಕ್ಕೆ ಮಹಾಯೋಜನೆಯನ್ನು 2015 ಕ್ಕೆ ತಯಾರಿಸಿದ್ದು ಅಂತಿಮ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಈ ಪ್ರದೇಶದಲ್ಲಿ ನಗರೀಕರಣಕ್ಕಾಗಿ ಕೆಳಕಂಡ ಪ್ರದೇಶಗಳನ್ನು ಕಾಯ್ದಿರಿಸಲಾಗಿದೆ

1)	ದೊಡ್ಡಬಳ್ಳಾಪುರ ನಗರೀಕರಣ	2059 19 ಹೆ
2)	ದೊಡ್ಡಬಳ್ಳಾಪುರ ಕಾರಿಡಾರ್	1525 72 ಹೆ
3)	ಏರ್ ಪೋರ್ಟ್ ನಗರೀಕರಣ	5906 99 ಹೆ
4)	ದೇವನಹಳ್ಳಿ ನಗರೀಕರಣ	2003 79 ಹೆ
5)	ವಿಜಯಪುರ ನಗರೀಕರಣ	1159 36 ಹೆ
	ಒಟ್ಟು	12654 05ಹೆ

ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ನಗರೀಕರಣಕ್ಕಾಗಿ (Urbanisable Block) ಪ್ರಸ್ತಾಪಿಸಲಾಗಿದೆ ಇದಲ್ಲದೆ (495 35ಹೆ) ಪ್ರದೇಶವನ್ನು ಕೆ ಐ ಎ ಡಿ ಬಿ ವತಿಯಿಂದ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಾಮಾನ್ಯ ಕೈಗಾರಿಕೆಗಾಗಿ 331 ಎಕರೆ ಹಾಗೂ ಜವಳಿ ತಂತ್ರಜ್ಞಾನಕ್ಕಾಗಿ ಒಟ್ಟು 1342 ಎಕರೆ ಜಮೀನನ್ನು ಅಭಿವದ್ಧಿಪಡಿಲಾಗುತ್ತದೆ ಈ ಕೈಗಾರಿಕಾ ಪ್ರದೇಶದಲ್ಲಿ ಸಹ ನೂತನ ಕೈಗಾರಿಕಾ ನೀತಿ–2006 ಕಾಲರೆ 3 2 ರನ್ವಯ ಶೇ 25ರ ಪ್ರದೇಶವನ್ನು ವಸತಿ ಹಾಗೂ ಇತರೆ ಸಾರ್ವಜನಿಕ ಲಭ್ಯಕ್ಕಾಗಿ ಕಾಯ್ದಿರಿಸಬೇಕಾಗಿರುತ್ತದೆ ಹೀಗಾಗಿ ಒಟ್ಟು 13149 40 ಹೆ ಪ್ರದೇಶವನ್ನು ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ

ನಿರ್ಮಾಣ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನಗರೀಕರಣಕ್ಕಾಗಿ ಉದ್ದೇಶಿಸಲಾಗಿದೆ

ಮಹಾಯೋಜನ–2005 (Mastrer Plan) ನ್ನು ಕುಡಿಯುವ ನೀರಿನ ಲಭ್ಯತೆ ಹಾಗೂ ಬೆಳವಣಿಗೆಗೆ ಬೇಡಿಕೆಗೆ ಅನುಗುಣವಾಗಿ ಸಾಕಷ್ಟು ಪ್ರಮಾಣದ ಜಮೀನನ್ನು ನಗರೀಕರಣಗೊಳಿಸಲು ಅವಕಾಶ ಕಲ್ಪಿಸಿರುವ ಪ್ರಯುಕ್ತ ದೊಡ್ಡಬಳ್ಳಾಪುರ ಉಪನಗರ ಯೋಜನೆಯನ್ನು ಪ್ರಸ್ತುತ ಉದ್ದೇಶಿಸಿರುವುದಿಲ್ಲ

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸರ್ವಕಾಲಿಕವಾಗಿ ನೀರನ್ನು ಪೂರೈಸುವಂತಹ ಕೆರೆ ಹಾಗೂ ನದಿಗಳು ಇಲ್ಲದ ಕಾರಣ ಅಂತರ್ ಜಲವನ್ನು ಅವಲಂಬಿಸಬೇಕಾಗಿರುತ್ತದೆ ಸದರಿ ತಾಲ್ಲೂಕು ಅಂತರ್ ಜಲ ರೀಚಾರ್ಜ್ ಪ್ರಮಾಣವು 5465 07 ಹೆಕ್ಟೇರ್ಮೀಟರ್ ಗಳಾಗಿದ್ದು, ಹಾಲಿ ಉಪಯೋಗದ ಪ್ರಮಾಣ ವಾರ್ಷಿಕ 9488 29 ಹೆಕ್ಟೇರ್ ಮೀಟರ್ ಗಳಾಗಿರುತ್ತದೆ ಈ ಕಾರಣಕ್ಕಾಗಿ ಗಣಿ ಹಾಗೂ ಭೂವಿಜ್ಞಾನ ಇಲಾಖೆಯು ಸದರಿ ಪ್ರದೇಶವನ್ನು "Over exploited " ಎಂದು ವರ್ಗೀಕರಿಸಿದೆ ಈ ಹಿನ್ನೆಲೆಯಲ್ಲಿ ದೊಡ್ಡಬಳ್ಳಾಪುರ ಪ್ರದೇಶದಲ್ಲಿ ಯಾವುದೇ ದೊಡ್ಡ ಪ್ರಮಾಣದ ನಗರೀಕರಣ ಸಂಬಂಧಿಸಿದ ಬೆಳವಣಿಗೆಯನ್ನು ಕೈಗೊಳ್ಳಲು ಸಾಧ್ಯವಾಗದ ಕಾರಣ ಸಂಯುಕ್ತ ವಸಾಹತು/ಉಪನಗರಗಳನ್ನು (Integrated Township) ಪ್ರಸ್ತಾಪಿಸಿರುವುದಿಲ್ಲ

398 (670) ಶ್ರೀ ನರಸಿಂಹಸ್ವಾಮಿ ಜಿ (ದೊಡ್ಡಬಳ್ಳಾಪುರ). ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳು ತುಂಬಾ ಹದಗೆಟ್ಟಿರುವುದರಿಂದ ಅವುಗಳ ದುರಸ್ತಿಗಾಗಿ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ,

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2005–06 ಮತ್ತು 2006–07ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿರುವ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ತಿ ಕಾಮಗಾರಿಗಳಾವುವು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 66 40 ಕಿಮೀಗಳ ಉದ್ದದ ರಾಜ್ಯ ಹೆದ್ದಾರಿಗಳು ಹಾಗೂ 148 00 ಕಿಮೀ ಗಳ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಇದ್ದು ಇವುಗಳ ದುರಸ್ತಿ ಮತ್ತು ಅಭಿವೃದ್ಧಿಯನ್ನು ವಿವಿಧ ಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಲ್ಲಿ ಕೈಗೊಂಡಿದೆ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ 2005–06 ಮತ್ತು 2006–07ರ ಸಾಲಿನಲ್ಲಿ ತೆಗೆದುಕೊಂಡಿರುವ ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು ಅನುಬರಿಧ–2 ರಲ್ಲಿ ನೀಡಿದೆ

2006–2007